ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 25/5/2020

# ವೈದ್ಯ ಸಲಕರಣೆ ಖರೀದಿ ಸರಕಾರಕ್ಕೆ ಅಕ್ರಮ ಕಂಟಕ

■ **ರಾಘವೇಂದ್ರ ಭಟ್** ಬೆಂಗಳೂರು
raghavendra.bhat1@timesgroup.com



ಔಷಧ ಹಾಗೂ ವೈದ್ಯ ಸಲಕರಣೆ ಖರೀದಿ ಅಕ್ರಮ ಆರೋಪ ವಿಚಾರ ಕಾಂಗ್ರೆಸ್-ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಗಿದೆ. ಕೋವಿಡ್-19 ಹಿನ್ನೆಲೆಯ ಈ ಅಕ್ರಮದ ಕುರಿತು ಡ್ರಗ್ಸ್ ಲಾಜಿಸ್ಟಿಕ್ ಆ್ಯಂಡ್ ವೇರ್ ಹೌಸಿಂಗ್ ಸೊಸೈಟಿಯ ವರದಿ ಕೇಳುವಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಆರೋಗ್ಯ ಇಲಾಖೆಗೆ ನಿರ್ದೇಶನ ನೀಡಿರುವುದೇ ಈ ರಾಜಕೀಯ ಜಗಳಕ್ಕೆ ಕಾರಣ.

ಕರ್ನಾಟಕ ರಾಷ್ಟ್ರ ಸಮಿತಿಯ ಸಿ. ಎನ್.ದೀಪಕ್ ಎಂಬುವರು ನೀಡಿದ ದೂರಿನ ಆಧಾರದ ಮೇಲೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಎಚ್.ಕೆ.ಪಾಟೀಲ್ ನಿರ್ದೇಶನದ ಅನ್ವಯ ವಿಧಾನಸಭೆ ಹಂಗಾಮಿ ಕಾರ್ಯದರ್ಶಿ ವಿಶಾಲಾಕ್ಷಿ ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ವರದಿ ನೀಡುವಂತೆ ಕೋರಿದ್ದಾರೆ. ಆದರೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈ ವಿಚಾರದಲ್ಲಿ ವ್ಯಾಪ್ತಿ ಮೀರಿ ವರ್ತಿಸಿದೆ. ಅರ್ಜಿ ಸಮಿತಿಗೆ ಪ್ರದತ್ತವಾದ ಅಧಿಕಾರವನ್ನು ಸ್ಪೀಕರ್ ಗಮನಕ್ಕೆ ತರದೇ ಚಲಾಯಿಸಿದೆ. ಇದರಿಂದ ಅಸಂಗತ್ಯವಾಗಿ ಕಾರ್ಯಾಂಗ ವ್ಯವಹಾರದಲ್ಲಿ ಕೈ ಹಾಕಿದಂತಾಗಿದೆ ಎಂಬ ವಾದವನ್ನು ಸರಕಾರ ಮುಂದಿಟ್ಟಿದೆ.




**ಭಯ ಏಕೆ?:** ಪಿಎಸಿ ಮಧ್ಯ ಪ್ರವೇಶದಿಂದ ಸರಕಾರ ಆತಂಕಕ್ಕೆ ಒಳಗಾಗಿದೆ. ವಿಧಾನಮಂಡಲದ ಒಟ್ಟು ಸದಸ್ಯ ಬಲದ ಶೇ.10ರಷ್ಟು ಸದಸ್ಯರು ಪಿಎಸಿ ಸದಸ್ಯರಾಗಿರುತ್ತಾರೆ. ಶಾಸನಸಭೆಗೆ ಇರುವ ಬಹುತೇಕ ಎಲ್ಲ ಅಧಿಕಾರಗಳು ಇರುವುದರಿಂದ 'ಮಿನಿ ಶಾಸನಸಭೆ' ಎಂದೂ ಕರೆಯುತ್ತಾರೆ. ಮಾಜಿ ಸಚಿವ ಎಚ್.ಕೆ.ಪಾಟೀಲ್ ಅಧ್ಯಕ್ಷರಾಗಿದ್ದು ಘಟಾನುಘಟಿಗಳಾದ ಉಮೇಶ್ ಕತ್ತಿ, ಮುರುಗೇಶ್ ನಿರಾಣಿ, ಕೆ.ಜಿ. ಬೋಪಯ್ಯ, ರಮೇಶ್ ಕುಮಾರ್, ಸಿ. ಎಂ.ಇಬ್ರಾಹಿಂ, ಶರವಣ, ಬಸವರಾಜ್ ಪಾಟೀಲ್ ಮೊದಲಾದವರು ಸದಸ್ಯರಾಗಿದ್ದಾರೆ. ಖರೀದಿ ಹಗರಣದ ಬಗ್ಗೆ ಪಿಎಸಿ ಪಟ್ಟು ಹಿಡಿದು ಕುಳಿತುಕೊಳ್ಳಬಹುದೆಂಬ ಆತಂಕ ಸರಕಾರವನ್ನು ಕಾಡುತ್ತಿದೆ.

> **ಸೆಕ್ಷನ್ 264(1)ರ ಪ್ರಕಾರ, ಸಮಿತಿಗೆ ಈ ರೀತಿ ವರ್ತಿಸುವ ಕಾರ್ಯವ್ಯಾಪ್ತಿ ಇದೆ. ಸಿಎಜಿ ವರದಿ ಪರಿಶೀಲನೆ ಸಮಿತಿಯ ಒಂದು ಜವಾಬ್ದಾರಿ. ಆದರೆ ಅದೊಂದೇ ಜವಾಬ್ದಾರಿ ಅಲ್ಲ. ಪೋಸ್ಟ್‌ಮಾರ್ಟಂ ಮಾಡುವುದು ನಮ್ಮ ಕೆಲಸವಲ್ಲ. ಏನಾದರೂ ತಪ್ಪುಗಳಾದಾಗ ರಾಜ್ಯದ ಹಿತದೃಷ್ಟಿಯಿಂದ ವರ್ತಿಸುವ ಜವಾಬ್ದಾರಿ ನಮ್ಮ ಮೇಲಿರುತ್ತದೆ.**
> **-ಎಚ್.ಕೆ.ಪಾಟೀಲ್** ಪಿಎಸಿ ಅಧ್ಯಕ್ಷ

ವಿಧಾನಮಂಡಲ ನಿಯಮ 264 (1) ಪ್ರಕಾರ ಖರ್ಚಿಗೆ ಸಂಬಂಧಪಟ್ಟಂತೆ ಎಲ್ಲ ಇಲಾಖೆ ಕಾರ್ಯದರ್ಶಿಗಳನ್ನು ಕರೆಸಿ ಅವರಿಂದ ಸಾಕ್ಷಿ ಹೇಳಿಸುವ ಅಧಿಕಾರ ಪಿಎಸಿಗೆ ದತ್ತವಾಗಿದ್ದು, ಅಧಿಕಾರಿಗಳು ಸುಳ್ಳು ಮಾಹಿತಿ ನೀಡಿದ್ದರೆ ಸಮನ್ಸ್ ಕರೆಸಿ ಛೀಮಾರಿ ಹಾಕುವ ಅಥವಾ ಕ್ರಿಮಿನಲ್ ಮೊಕದ್ದಮೆ ಹೂಡುವ ಅಧಿಕಾರವೂ ಇವೆ. ಕಲ್ಲಿದ್ದಲು ಹಗರಣಕ್ಕೆ ಸಂಬಂಧಪಟ್ಟಂತೆ ಸಂಸತ್ತಿನ ಲೆಕ್ಕಪತ್ರ ಸಮಿತಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನೇ ಸಭೆಗೆ ಕರೆಸಿದ್ದ ಉದಾಹರಣೆ ಇದೆ.

**ದಾಖಲೆ ಬಿಡುಗಡೆ?:** ಪಿಪಿಇ ಹಾಗೂ ಇನ್ನಿತರ ವೈದ್ಯ ಕಿಟ್ ಖರೀದಿಗೆ ಸಂಬಂಧಪಟ್ಟಂತೆ ಪಿಎಸಿ ಬಳಿ ಪ್ರಬಲ ದಾಖಲೆ ಇದೆ ಎಂದು ತಿಳಿದು ಬಂದಿದೆ. 600 ರೂ. ಮೌಲ್ಯದ ಕಿಟ್‌ಗೆ 2,680 ರೂ. ನಿಗದಿ ಮಾಡಿರುವುದೇ ವಿವಾದದ ಕೇಂದ್ರ ಬಿಂದು. ಈ ಹಿನ್ನೆಲೆಯಲ್ಲಿ ಮುಂದಿನ ವಾರ ನಡೆಯುವ ಸಭೆಯಲ್ಲಿ ದಾಖಲೆಗಳನ್ನು ಮಂಡಿಸಿ ಬಳಿಕ ಮಾಧ್ಯಮಗಳಿಗೆ ಬಿಡುಗಡೆ ಮಾಡಲು ಸಮಿತಿ ಪ್ರಮುಖರು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ.